ಪ್ರಮಾಣವಚನ

ವಿಷಯ : ಬಳ್ಳಾರಿ ಗ್ರಾಮಾಂತರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿರುವ ಶ್ರೀ ಬಿ. ಶ್ರೀರಾಮುಲು ಅವರಿಂದ

ಅಧ್ಯಕ್ಷರು: ಈಗ ಬಳ್ಳಾರಿ ಗ್ರಾಮಾಂತರ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿರುವ ಶ್ರೀ ಬಿ. ಶ್ರೀರಾಮುಲು ಪ್ರಮಾಣವಚನ

ಶ್ರೀ ಬಿ. ಶ್ರೀರಾಮುಲು : (ಬಳ್ಳಾರಿ ಗ್ರಾಮಾಂತರ ಕ್ಷೇತ್ರ) ಇವರು ಭಗವಂತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನನ್ನದೊಂದು ನಿಲುವಳಿ ಸೂಚನೆ ಇದೆ.

ಅಧ್ಯಕ್ಷರು : ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಬಿ.ಕೆ. ಸಂಗಮೇಶ್ವರ (ಭದ್ರಾವತಿ): ಮಾನ್ಯ ಅಧ್ಯಕ್ಷರೆ, ತಹಶೀಲ್ದಾರರಿಂದ ಒಬ್ಬ ಎಂ.ಎಎಲ್.ಗೆ ಗೌರವವಿಲ್ಲವೆಂದರೆ, ನಾವು ಹೇಗೆ ಕೆಲಸ ಮಾಡುವುದು? (ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸದನ ಬಾವಿಗೆ ಬಂದು ನಿಂತರು)

ಅಧ್ಯಕ್ಷರು: ಮೊನ್ನೆ BAC ನಲ್ಲಿ ನಿಮ್ಮ ಬಗ್ಗೆ ಪ್ರಸ್ತಾಪವಾಗಿ ತೀರ್ಮಾನವಾಗಿದೆ.

ಗೊಂದಲ

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಭದ್ರಾವತಿ ಶಾಸಕರು ಹೇಳುತ್ತಿರುವುದು ಇದು ಮೊದಲನೆ ಸಲವಲ್ಲ, 5-6ನೇ ಸಲ ಹೇಳುತ್ತಿದ್ದಾರೆ, ಇಷ್ಟು ಸಾರಿ ತಮಗೆ ಅರಿಕೆ ಮಾಡಿಕೊಂಡಂಥ ಸಂದರ್ಭದಲ್ಲೂ ಕೂಡ, ಯಾವುದೇ ರೀತಿಯಾದ ರಕ್ಷಣೆ ಸರ್ಕಾರದಿಂದ ಸಿಕ್ಕಿಲ್ಲವೆಂದು ಹೇಳಿದಾಗ ಯಾವ ರೀತಿ ಒಬ್ಬ ಶಾಸಕ ಕೆಲಸ ಮಾಡಬೇಕು ?

ಅಧ್ಯಕ್ಷರು: ಈಗ ಪ್ರಶ್ನೋತ್ತರ ಮುಗಿಯಲಿ, ಮಾನ್ಯ ಸದಸ್ಯರು ಏನು ಹೇಳಬೇಕೆಂದಿದ್ದಾರೆ, ಅದನ್ನು ಇವತ್ತೇ ಇಲ್ಲೇ ತೀರ್ಮಾನ ಮಾಡಿ ಕೊಡೋಣ. ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ತೆರಳಿ, ಪ್ರಶ್ನೋತ್ತರವಾದ ಮೇಲೆ ತಮಗೆ rise ಮಾಡುವುದಕ್ಕೆ ಅವಕಾಶ ಕೊಡುತ್ತೇನೆ, ಈಗ ಪ್ರಶ್ನೋತ್ತರ.